**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು**

**ಸಿಸಿ ನಂ.197/2023**

**ಫಿರ್ಯಾದುದಾರರುಃ** ಹೆಚ್.ಎ.ಗೋಪಾಲಕೃಷ್ಣ, ಬಿನ್ ಲೇಟ್ ಅಣ್ಣೇಗೌಡ,
50 ವರ್ಷ, ವಾಸಃ ಹೆಗ್ಗಂದೂರು ಗ್ರಾಮ,
ಹನಗೋಡು ಹೋಬಳಿ, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

**– ವಿರುದ್ಧ –**

**ಆರೋಪಿಃ** ಶ್ರೀಮತಿ ಮಹದೇವಮ್ಮ, ಕೋಂ ಲೇಟ್ ಮರಿಸ್ವಾಮಿನಾಯಕ,
C/o ನಾಗರಾಜು, ವಾಸಃ ನಂ. 3678,
ಮಂಜುನಾಥ ಬಡಾವಣೆ, ಹುಣಸೂರು ಟೌನ್,
ಮೈಸೂರು ಜಿಲ್ಲೆ.

ಕೆಲಸ ಮಾಡುವ ಸ್ಥಳಃ ಹುಣಸೂರು ಸಹಾಯಕ
ಕಾರ್ಯಪಾಲಕ, ಅಭಿಯಂತರರ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್
ಉಪವಿಭಾಗ, ಹುಣಸೂರು ಇಂಡೇನ್ ಗಾಸ್
ಎದುರು, ಹುಣಸೂರು.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರ ಅಡಿಯಲ್ಲಿ ಆರೋಪಿಯ ಹೇಳಿಕೆ**

| | |
|---|---|
| ಪ್ರಶ್ನೆ 1: | ಫಿರ್ಯಾದುದಾರರಾದ ಹೆಚ್.ಎ.ಗೋಪಾಲಕೃಷ್ಣ ರವರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ? |
| ಉತ್ತರ: | ತಿಳಿದಿದೆ |
| ಪ್ರಶ್ನೆ 2: | ಪಿ.ಡಬ್ಲ್ಯೂ1 ಹೆಚ್.ಎ.ಗೋಪಾಲಕೃಷ್ಣ ರವರು ತಮ್ಮ ಸಾಕ್ಷ್ಯದಲ್ಲಿ, ನೀವು ಮತ್ತು ಅವರು ಹಲವಾರು ವರ್ಷಗಳಿಂದ ಒಬ್ಬರಿಗೊಬ್ಬರು ಪರಿಚಯಸ್ಥರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 3: | ಪಿ.ಡಬ್ಲ್ಯೂ1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಪರಿಚಯದ ಆಧಾರದ ಮೇಲೆ ನೀವು ನಿಮ್ಮ ಮಗಳ ಹಳೆಯ ಸಾಲವನ್ನು ತೀರಿಸುವ ಮತ್ತು ಗೃಹಕೃತ್ಯದ ಸಲುವಾಗಿ ಅವರಿಂದ ರೂ.3,00,000/- ಗಳನ್ನು ಮೂರು ತಿಂಗಳ ಒಳಗೆ ಮರುಪಾವತಿಸುವುದಾಗಿ ಹೇಳಿ ಸಾಲವಾಗಿ ಪಡೆದುಕೊಂಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 4: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಸಾಲದ ಮರುಪಾವತಿಗಾಗಿ ನೀವು 02.03.2023 ರ ದಿನಾಂಕ ನಮೂದಿಸಿದ ಫೆಡರಲ್ ಬ್ಯಾಂಕ್, ಹುಣಸೂರು ಶಾಖೆಯ ಚೆಕ್ ಸಂಖ್ಯೆ: 071783 ಅನ್ನು ರೂ.3,00,000/-ಗಳಿಗೆ ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 5: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಚೆಕ್ ಅನ್ನು ಅವರು ತಮ್ಮ ಬ್ಯಾಂಕ್ ಇರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯ, ಹುಣಸೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂಬ ಕಾರಣಕ್ಕಾಗಿ ಸದರಿ ಚೆಕ್ ಅಮಾನ್ಯಗೊಂಡು ದಿನಾಂಕಃ 03.03.2023 ರಂದು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 6: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಬಗ್ಗೆ ದಿನಾಂಕ 09.03.2023 ರಂದು ಅವರು ನಿಮಗೆ ತಮ್ಮ ವಕೀಲರ ಮೂಲಕ ನೊಂದಾಯಿತ ಅಂಚೆಯ ಮೂಲಕ ನೋಟೀಸನ್ನು ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 7: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ನೋಟೀಸ್ ನಿಮಗೆ 13.03.2023 ರಂದು ಜಾರಿಯಾಗಿದ್ದರೂ ಸಹ ನೀವು ಉದ್ದೇಶಪೂರ್ವಕವಾಗಿ ಫಿರ್ಯಾದುದಾರರಿಗೆ ನೀಡಬೇಕಾದ ಚೆಕ್ಕಿನ ಹಣವನ್ನು ಮರುಪಾವತಿಸಿಲ್ಲ ಹಾಗು ನೋಟೀಸಿಗೆ ಉತ್ತರವನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 8: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆದರೂ ಸಹ ನೀವು ಈವರೆಗೂ ಸಾಲದ ಹಣವನ್ನು ಮರುಪಾವತಿಸದೆ ಇರುವುದರಿಂದ ನೆಗೋಶಿಯೇಬಲ್ ಇನ್ಸ್ಟುಮೆಂಟ್ಸ್ ಕಾಯಿದೆಯ ಕಲಂ 138ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 9: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೀವು ಅವರಿಗೆ ನೀಡಿದ ಚೆಕ್, ಬ್ಯಾಂಕಿನವರು ನೀಡಿದ ಹಿಂಬರಹ, ವಕೀಲರ ಮೂಲಕ ನೀಡಿದ ನೋಟೀಸಿನ ಕಚೇರಿ ಪ್ರತಿ, ಎರಡು ಅಂಚೆ ರಶೀದಿಗಳು, ಎರಡು ಅಂಚೆ ಸ್ವೀಕೃತಿ ಪತ್ರಗಳು ಮತ್ತು ದೂರನ್ನು ನಿಪಿ–1 ರಿಂದ ನಿಪಿ– |

| | |
|---|---|
| | 8 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 10: | ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ? |
| ಉತ್ತರ: | ಇದೆ |
| ಪ್ರಶ್ನೆ 11: | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ? |
| ಉತ್ತರ: | ಇದೆ |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 17.02.2026.

ANITHA
Digitally signed by ANITHA
Date: 2026.02.17 17:58:03 +0530

Sd/-

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ಆರೋಪಿಯ ಸಹಿಃ